**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/734/2023 ದಿನಾಂಕ:04.01.2024
Comp. No.: 1275281

**ಸುತ್ತೋಲೆ**

**ವಿಷಯ:-** ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ "ಓದುವ ಬೆಳಕು" ಕಾರ್ಯಕ್ರಮದ ಅಂಗವಾಗಿ **ಜನವರಿ–2024 ರ ಮಾಹೆಯಲ್ಲಿ ಹೊಸ ವರ್ಷ–ನನ್ನ ಸಂಕಲ್ಪ, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ, ಗಣರಾಜ್ಯ ಸಂವಿಧಾನ ಮತ್ತು ಮಕ್ಕಳು ಹಾಗೂ ಹುತಾತ್ಮರನ್ನು ಸ್ಮರಿಸೋಣ** ಅಭಿಯಾನ ಆಯೋಜಿಸುವ ಕುರಿತು.

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, ಮಕ್ಕಳು ಓದುವುದರಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು **"ಓದುವ ಬೆಳಕು"** ಕಾರ್ಯಕ್ರಮವನ್ನು ಅನುಷ್ಠಾನಿಸಲು ಈಗಾಗಲೇ ತಿಳಿಸಲಾಗಿದೆ. ಸದರಿ ಕಾರ್ಯಕ್ರಮದ ಮೂಲಕ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಹಾಗೂ ನಿರಂತರತೆಯನ್ನು ಕಾಪಾಡುವ ಗುರಿಯನ್ನು ಹೊಂದಲಾಗಿದೆ. ಅರಿವು ಕೇಂದ್ರಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಮುಂದುವರೆದು, "ಓದುವ ಬೆಳಕು" ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಆಯೋಜಿಸಲಾಗುತ್ತಿದೆ. ಹೀಗೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಅದರಂತೆ, ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಮಕ್ಕಳಿಗೆ **ಜನವರಿ–2024** ರ ಮಾಹೆಯಲ್ಲಿ **ಹೊಸ ವರ್ಷ- ನನ್ನ ಸಂಕಲ್ಪ, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ, ಗಣರಾಜ್ಯ, ಸಂವಿಧಾನ ಮತ್ತು ಮಕ್ಕಳು ಹಾಗೂ ಹುತಾತ್ಮರನ್ನು ಸ್ಮರಿಸೋಣ** ಅಭಿಯಾನ ಆಯೋಜಿಸಲು ನಿರ್ಧರಿಸಿದೆ.

## ಅಭಿಯಾನದ ಚಟುವಟಿಕೆಗಳು:

### 1. ಜನವರಿ- 1 ರಿಂದ 15 ರವರೆಗೆ : ಹೊಸ ವರ್ಷ– ನನ್ನ ಸಂಕಲ್ಪ

ಹೊಸ ವರ್ಷ –2024 ಪ್ರಾರಂಭಗೊಂಡಿದೆ. ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಮಕ್ಕಳು ನೂತನ ವರ್ಷಾಚರಣೆಯೊಂದಿಗೆ 2024ರಲ್ಲಿ ತಮ್ಮ ಗುರಿಗಳನ್ನು ನಿರ್ಧರಿಸಿಕೊಂಡು ಸಂಕಲ್ಪ ಮಾಡಲು ನೆರವಾಗುವುದು ಹಾಗೂ ವರ್ಷ ಪೂರ್ತಿ ಸಂಕಲ್ಪ ಸಾಧನೆಗೆ ಶ್ರಮಿಸಲು ಪ್ರೇರೇಪಿಸುವುದು.

**ಮಾಡಬಹುದಾದ ಸಂಕಲ್ಪಗಳು: ಉದಾರಹರಣೆಗಳನ್ನು ಈ ಕೆಳಗೆ ನೀಡಲಾಗಿದೆ**

- 7 ಮತ್ತು 10ನೇ ತರಗತಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ನಿಗದಿತ ಪಠ್ಯಕ್ರಮವನ್ನು ಅರ್ಥಮಾಡಿಕೊಂಡು ಓದುವುದು; ಉತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದುವ ಸಂಕಲ್ಪ ಮಾಡುವುದು.

- ದ್ವಿತೀಯ ಪಿಯುಸಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾಗಿ ತಮ್ಮಿಷ್ಟದ ವೃತ್ತಿಪರ ಅಥವಾ ಪದವಿ ಕೋರ್ಸ್‌ಗಳಿಗೆ ಸೇರುವುದು.
- ಪೋಷಕರಿಗೆ ಯಾವುದೇ ತೊಂದರೆ ನೀಡದೆ ವಿದ್ಯಾಭ್ಯಾಸವನ್ನು ಕೈಗೊಳ್ಳುವುದು.
- ನೆರೆಹೊರೆಯವರು, ಸ್ನೇಹಿತರೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು;
- ಯೋಗ/ಕ್ರೀಡೆ/ನೃತ್ಯ/ಸಂಗೀತಾಭ್ಯಾಸದಂತಹ ಚಟುವಟಿಕೆಗಳಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳುವುದು
- ಮೊಬೈಲ್/ಟಿವಿ/ಸಾಮಾಜಿಕ ಮಾಧ್ಯಮಗಳ ಗೀಳಿನಿಂದ ದೂರವಿರುವ ಸಂಕಲ್ಪ ಮಾಡುವುದು ಇತ್ಯಾದಿ

ಈ ನಿಟ್ಟಿನಲ್ಲಿ **ಜನವರಿ 1, 2024 ರಿಂದ ಜನವರಿ 15, 2024 ರವರೆಗೆ ಹೊಸ ವರ್ಷ– ನನ್ನ ಸಂಕಲ್ಪ** ಕುರಿತಾಗಿ ಚಟುವಟಿಕೆಗಳನ್ನು ಅರಿವು ಕೇಂದ್ರಗಳಲ್ಲಿ ಆಯೋಜಿಸಿ, ಹೊಸ ಸಂಕಲ್ಪ ಕೈಗೊಳ್ಳಲು ಮಕ್ಕಳನ್ನು ಹುರಿದುಂಬಿಸುವುದು. ಮಕ್ಕಳು ಕೈಗೊಳ್ಳುವ ಸಂಕಲ್ಪಗಳ ಬಗ್ಗೆ ಅವರೇ ತಮ್ಮ ಅನಿಸಿಕೆಗಳನ್ನು ಬರೆಯುವುದು ಹಾಗೂ ಅರಿವು ಕೇಂದ್ರಗಳಲ್ಲಿ ಪ್ರದರ್ಶಿಸುವುದು.

## 2. **ಜನವರಿ 24 : ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ**

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು 2008 ರಿಂದ ಪ್ರತಿ ವರ್ಷವೂ ಆಚರಿಸಲಾಗುತ್ತಿದೆ. ಹೆಣ್ಣುಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮತ್ತು ಅವುಗಳನ್ನು ಎದುರಿಸಲು ಇರುವ ಕಾನೂನುಗಳು ಮತ್ತು ನಿಯಮಗಳ ಬಗ್ಗೆ ಅರಿವು ಮೂಡಿಸುವುದು; ಕುಟುಂಬ ಹಾಗೂ ಸಮಾಜದಲ್ಲಿ ಲಿಂಗತ್ವ ತಾರತಮ್ಯವನ್ನು ತೊಲಗಿಸುವುದು ಹಾಗೂ ಸಮಾನತೆಯನ್ನು ಸ್ಥಾಪಿಸುವುದಾಗಿದೆ. ಆದ್ದರಿಂದ ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಲಿಂಗ ತಾರತಮ್ಯವನ್ನು ಅರ್ಥಮಾಡಿಸುವುದು ಮತ್ತು ಮಕ್ಕಳಲ್ಲಿ ಸಮಾನತೆಯ ಬೀಜವನ್ನು ಬಿತ್ತುವುದು ಅವಶ್ಯಕವಿದೆ. ಆದ್ದರಿಂದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಅಂಗವಾಗಿ ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ ಚಟುವಟಿಕೆಗಳನ್ನು ಆಯೋಜಿಸುವುದು.

**ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:**

- ಶಿಕ್ಷಣ, ಉದ್ಯೋಗ, ಕ್ರೀಡೆ, ವೈದ್ಯಕೀಯ, ಸಾಹಿತ್ಯ, ಕಲೆ, ಸಂಸ್ಕೃತಿ ಇವೇ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಊರಿನ ಹೆಣ್ಣು ಮಕ್ಕಳನ್ನು ಸನ್ಮಾನಿಸುವುದು
- ಸಾಧಕ ಹೆಣ್ಣುಮಕ್ಕಳು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸ್ಫೂರ್ತಿಯುತ ಮಾತುಗಳನ್ನಾಡುವುದು
- ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಕಿರು-ನಾಟಕಗಳನ್ನು ಮಾಡಿಸುವುದು; ಬಾಲ್ಯ ವಿವಾಹ ನಿರ್ಮೂಲನೆ, ಬಾಲ ಕಾರ್ಮಿಕ ಪದ್ಧತಿ, ಹೆಣ್ಣು ಮತ್ತು ಗಂಡು ಮಗುವಿನ ತಾರತಮ್ಯ ಬೇಡ ಇತ್ಯಾದಿ ಕುರಿತು.
- ಅರಿವು ಕೇಂದ್ರಗಳಿಗೆ ಬರುವ ಗಂಡು ಮಕ್ಕಳಿಗೆ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಬಗ್ಗೆ ಪ್ರಬಂಧ, ಭಾಷಣ, ಚಿತ್ರಕಲೆ ಸ್ಪರ್ಧೆಯನ್ನು ಏರ್ಪಡಿಸುವುದು.

## 3. **ಜನವರಿ –26: ಗಣರಾಜ್ಯ, ಸಂವಿಧಾನ ಮತ್ತು ಮಕ್ಕಳು**

1950ರ ಜನವರಿ 26 ಸಂವಿಧಾನವು ಅಧಿಕೃತವಾಗಿ ಜಾರಿಗೆ ಬಂದು, ಭಾರತವನ್ನು ಗಣರಾಜ್ಯವಾಗಿ ಒಪ್ಪಿಕೊಂಡ ದಿನ. ಆ ದಿನವನ್ನು ಪ್ರತಿ ವರ್ಷ ಗಣರಾಜ್ಯೋತ್ಸವವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ದಿನದ ಅಂಗವಾಗಿ ಮಕ್ಕಳಲ್ಲಿ ಸಂವಿಧಾನವು ದೇಶದ ಪ್ರಜೆಗಳಿಗೆ ಕೊಡ ಮಾಡಿರುವ ಹಕ್ಕುಗಳು, ಕರ್ತವ್ಯಗಳು ಹಾಗೂ ಅವಕಾಶಗಳ ಬಗ್ಗೆ ಅರಿವು, ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಚಟುವಟಿಕೆಗಳನ್ನು ಏರ್ಪಡಿಸುವುದು.

**ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:**

- ಸಂವಿಧಾನದ ಪೀಠಿಕೆ ಓದುವುದು ಹಾಗೂ ಮಕ್ಕಳಿಂದ ಓದಿಸುವುದು.
- ಸ್ಥಳೀಯ ಶಾಲಾ ಶಿಕ್ಷಕರು/ಕಾಲೇಜು ಉಪನ್ಯಾಸಕರು/ಸ್ಥಳೀಯ ಪರಿಣಿತರಿಂದ ಸಂವಿಧಾನದ ಬಗ್ಗೆ, ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಬಗ್ಗೆ ಮಾತನಾಡಿಸಿ, ಮಕ್ಕಳಲ್ಲಿ ಅರಿವು ಮೂಡಿಸುವುದು.
- ಸಂವಿಧಾನದ ಮೂಲ ಆಶಯಗಳ ಬಗ್ಗೆ ಮಕ್ಕಳಿಗೆ ಪ್ರಬಂಧ, ಆಶುಭಾಷಣ, ರಸಪ್ರಶ್ನೆ ಚಟುವಟಿಕೆಗಳನ್ನು ಆಯೋಜಿಸುವುದು (ರಸಪ್ರಶ್ನೆಗೆ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಪ್ರಶ್ನಾವಳಿಯನ್ನು ಕಳುಹಿಸಿಕೊಡಲಾಗುವುದು)
- ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಂಡ ಮಕ್ಕಳ ಹೆಸರುಗಳನ್ನು ಅವರ ಚಟುವಟಿಕೆಗಳೊಂದಿಗೆ ಅರಿವು ಕೇಂದ್ರದ ಗೋಡೆ ಫಲಕಗಳಲ್ಲಿ ಪ್ರದರ್ಶಿಸಿ, ಪ್ರಶಂಸಿಸುವುದು

**4. ಜನವರಿ –30: ಹುತಾತ್ಮರನ್ನು ಸ್ಮರಿಸೋಣ.**

1948ರ ಜನವರಿ 30 ರಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹುತಾತ್ಮರಾದ ದಿನ. ಈ ದಿನವನ್ನು 'ಹುತಾತ್ಮರ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಸತ್ಯ, ಶಾಂತಿ, ಅಹಿಂಸೆ, ಉಪವಾಸ, ಸತ್ಯಾಗ್ರಹದಂತಹ ಹೋರಾಟದ ಅಸ್ತ್ರಗಳನ್ನು ಜಗತ್ತಿಗೆ ನೀಡಿದ, ನುಡಿದಂತೆ ನಡೆದ ಮಹಾನ್ ಮಾನವತಾವಾದಿ ಬಾಪೂಜಿಯವರಿಗೆ ಈ ದಿನದಂದು ನಮನ ಸಲ್ಲಿಸುವುದು. ಜೊತೆಗೆ ದೇಶಕ್ಕಾಗಿ ಹುತಾತ್ಮರಾದವರನ್ನು ಭಕ್ತಿ ಪೂರ್ವಕವಾಗಿ ಸ್ಮರಿಸುವುದು.

- ದೇಶ, ದೇಶಾಭಿಮಾನ, ದೇಶ ಸೇವೆಯ ಕುರಿತಂತೆ NSS ವಿದ್ಯಾರ್ಥಿಗಳು, NCC ಕೆಡೆಟ್‌ಗಳೊಂದಿಗೆ ಸಂವಾದ ಏರ್ಪಡಿಸುವುದು.
- ಆಂತರಿಕ ಭದ್ರತೆಗೆ ಸದಾಕಾಲ ಕೆಲಸ ಮಾಡುವ ಪೊಲೀಸ್ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳೊಂದಿಗೆ ಸಂವಾದ ಏರ್ಪಡಿಸುವುದು.

ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸದರಿ ಅಭಿಯಾನದ ಕುರಿತು ಪಂಚತಂತ್ರ 2.0 ತಂತ್ರಾಂಶದ ಈವೆಂಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್‌ನಲ್ಲಿ ಮಾಹಿತಿಯನ್ನು ಇಂದೀಕರಿಸಲು ತಿಳಿಸಿದೆ.

ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಮಕ್ಕಳಿಗೆ **ಜನವರಿ–2024** ರ ಮಾಹೆಯಲ್ಲಿ **ಹೊಸ ವರ್ಷ– ನನ್ನ ಸಂಕಲ್ಪ, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ, ಗಣರಾಜ್ಯ, ಸಂವಿಧಾನ ಮತ್ತು ಮಕ್ಕಳು ಹಾಗೂ ಹುತಾತ್ಮರನ್ನು ಸ್ಮರಿಸೋಣ** ಅಭಿಯಾನವನ್ನು ಆಯೋಜಿಸಲು ಕ್ರಮ ಕೈಗೊಳ್ಳುವುದು.

**(ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್),**
**ಗ್ರಾಅಪಂರಾಜ್ ಇಲಾಖೆ ಇವರಿಂದ ಟಿಪ್ಪಣಿ ಅನುಮೋದಿತ)**

**ಆಯುಕ್ತರು**
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

3. ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯತಿಯ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.